सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಖಾಸಗಿ ಭದ್ರತಾ ಏಜೆನ್ಸಿಗಳ (ವಿನಿಯಮನ) ಅಧಿನಿಯಮ, 2005

(2005ರ ಅಧಿನಿಯಮ ಸಂಖ್ಯೆ 29)

**[25ನೇ ಏಪ್ರಿಲ್, 2011 ರಂದು ಜಾರಿಯಲ್ಲಿದ್ದಂತೆ]**

# THE PRIVATE SECURITY AGENCIES (REGULATION) ACT, 2005

**(Act No. 29 of 2005)**

[As on 25th April, 2011]

# ಮುನ್ನುಡಿ

25.04.2011 ರಂದು ಜಾರಿಯಲ್ಲಿದ್ದಂತೆ, ದಿ ಪ್ರೈವೇಟ್ ಸೆಕ್ಯುರಿಟಿ ಏಜೆನ್ಸೀಸ್ (ರೆಗ್ಯುಲೇಷನ್) ಆ್ಯಕ್ಟ್, 2005 (2005ರ 29) – ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 25.04.2011ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 45ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 57 ರಿಂದ 67 ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

**ವಿ.ಕೆ. ಭಸೀನ್**
ಕಾರ್ಯದರ್ಶಿ
ಭಾರತ ಸರ್ಕಾರ.

ನವದೆಹಲಿ
ದಿನಾಂಕ:

## PREFACE

This edition of the Private Security Agencies (Regulation) Act, 2005 (29 of 2005) as on the 25.04.2011 contains the authoritative text of that Act in Kannada which was published in the Gazette of India Extraordinary, Part IX, Section 1, No.1, Vol. 45, dated 25.04.2011 on pages 57 to 67.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

**V.K. BHASIN**
Secretary,
Government of India.

New Delhi
Date :

# ಖಾಸಗಿ ಭದ್ರತಾ ಏಜೆನ್ಸಿಗಳ (ವಿನಿಯಮನ) ಅಧಿನಿಯಮ, 2005

## ಪ್ರಕರಣಗಳ ಅನುಕ್ರಮಣಿಕೆ


| ಪ್ರಕರಣಗಳು: | | ಪುಟಗಳು |
|---|---|---|
| 1. | ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | 1 |
| 2. | ಪರಿಭಾಷೆಗಳು | 1 |
| 3. | ನಿಯಂತ್ರಣ ಪ್ರಾಧಿಕಾರಿಯ ನೇಮಕ | 2 |
| 4. | ವ್ಯಕ್ತಿಗಳು ಅಥವಾ ಖಾಸಗಿ ಭದ್ರತಾ ಏಜೆನ್ಸಿಯು ಲೈಸೆನ್ಸ್ ಇಲ್ಲದೆ ಖಾಸಗಿ ಭದ್ರತಾ ರಕ್ಷಕನನ್ನು ನಿಯೋಜಿಸಬಾರದು ಅಥವಾ ಒದಗಿಸಬಾರದು | 2 |
| 5. | ಲೈಸೆನ್ಸ್‌ಗಾಗಿ ಅರ್ಹತೆ | 3 |
| 6. | ಲೈಸೆನ್ಸ್‌ಗೆ ಅರ್ಹರಾಗದ ವ್ಯಕ್ತಿಗಳು | 3 |
| 7. | ಲೈಸೆನ್ಸ್‌ನ ಮಂಜೂರಾತಿಗಾಗಿ ಅರ್ಜಿ | 4 |
| 8. | ಲೈಸೆನ್ಸ್‌ನ ನವೀಕರಣ | 5 |
| 9. | ಕಾರ್ಯಾಚರಣೆಯ ಪ್ರಾರಂಭ ಮತ್ತು ಮೇಲ್ವಿಚಾರಕರನ್ನು ನೇಮಿಸಿಕೊಳ್ಳಲು ಷರತ್ತುಗಳು | 6 |
| 10. | ಖಾಸಗಿ ಭದ್ರತಾ ರಕ್ಷಕನಾಗಲು ಅರ್ಹತೆ | 6 |
| 11. | ಲೈಸೆನ್ಸ್‌ನ ಷರತ್ತುಗಳು | 8 |
| 12. | ಲೈಸೆನ್ಸ್‌ನ್ನು ಪ್ರದರ್ಶಿಸುವುದು | 8 |
| 13. | ಲೈಸೆನ್ಸ್‌ನ ಅಮಾನತು ಮತ್ತು ರದ್ದಿಯಾತಿ | 8 |
| 14. | ಅಪೀಲುಗಳು | 11 |
| 15. | ಖಾಸಗಿ ಭದ್ರತಾ ಏಜೆನ್ಸಿಯು ನಿರ್ವಹಿಸಬೇಕಾದ ರಿಜಿಸ್ಟರು | 11 |
| 16. | ಲೈಸೆನ್ಸ್, ಮೊದಲಾದವುಗಳ ಪರಿಶೀಲನೆ | 12 |
| 17. | ಫೋಟೋ ಗುರುತು ಚೀಟಿಯನ್ನು ನೀಡುವುದು | 12 |
| 18. | ಅನಧಿಕೃತ ವ್ಯಕ್ತಿಗೆ ಮಾಹಿತಿಯನ್ನು ಬಹಿರಂಗಪಡಿಸುವುದು | 12 |
| 19. | ಪ್ರತ್ಯಾಯೋಜನೆ | 13 |
| 20. | ಕೆಲವು ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ | 13 |
| 21. | ಕೆಲವು ಸಮವಸ್ತ್ರಗಳ ಅನಧಿಕೃತ ಬಳಕೆಗಾಗಿ ದಂಡನೆ | 14 |
| 22. | ಕಂಪನಿಗಳಿಂದ ಅಪರಾಧಗಳು | 14 |
| 23. | ರಕ್ಷಣೆ | 15 |
| 24. | ರಾಜ್ಯಗಳು ಅಳವಡಿಸಿಕೊಳ್ಳುವುದಕ್ಕಾಗಿ ಮಾದರಿ ನಿಯಮಗಳನ್ನು ರಚಿಸುವುದು | 15 |
| 25. | ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ | 15 |
| | ಅನುಸೂಚಿ | 17 |

# ಖಾಸಗಿ ಭದ್ರತಾ ಏಜೆನ್ಸಿಗಳ (ವಿನಿಯಮನ) ಅಧಿನಿಯಮ, 2005

## (2005ರ ಅಧಿನಿಯಮ ಸಂ. 29)

[23ನೇ ಜೂನ್, 2005]

ಖಾಸಗಿ ಭದ್ರತಾ ಏಜೆನ್ಸಿಗಳ ವಿನಿಯಮನಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಖಾಸಗಿ ಭದ್ರತಾ ಏಜೆನ್ಸಿಗಳ (ವಿನಿಯಮನ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ರಕ್ಷಾ ಕವಚಿತ ವಾಹನ ಸೇವೆ" ಎಂದರೆ ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ರಕ್ಷಾ ಕವಚಿತ ವಾಹನ ಸೇವೆಯ ಮತ್ತು ಇತರ ಸಂಬಂಧಿತ ಸೇವೆಗಳ ಜೊತೆಗೆ ಸಶಸ್ತ್ರ ಕಾವಲುಪಡೆಯನ್ನು ನಿಯೋಜನೆ ಮಾಡುವುದರ ಮೂಲಕ ಒದಗಿಸಿದ ಸೇವೆ;

(ಬಿ) "ನಿಯಂತ್ರಣ ಪ್ರಾಧಿಕಾರಿ" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ನಿಯಂತ್ರಣ ಪ್ರಾಧಿಕಾರಿ ಎಂದು ಅರ್ಥ;

(ಸಿ) "ಲೈಸೆನ್ಸ್" ಎಂದರೆ 7ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಮಂಜೂರು ಮಾಡಿದ ಲೈಸೆನ್ಸ್ ಎಂದು ಅರ್ಥ;

(ಡಿ) "ಅಧಿಸೂಚನೆ" ಎಂದರೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದು ಅರ್ಥ;

(ಇ) "ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಎಫ್) "ಖಾಸಗಿ ಭದ್ರತೆ" ಎಂದರೆ ಲೋಕನೌಕರನಲ್ಲದ ಯಾರೇ ವ್ಯಕ್ತಿಯು ಯಾರೇ ವ್ಯಕ್ತಿಯನ್ನು ಅಥವಾ ಸ್ವತ್ತನ್ನು ಅಥವಾ ಅವೆರಡನ್ನೂ ರಕ್ಷಿಸಲು ಒದಗಿಸುವ ಭದ್ರತೆ ಎಂದು ಅರ್ಥ ಮತ್ತು ಇದು ರಕ್ಷಾ ಕವಚಿತ ವಾಹನ ಸೇವೆಯನ್ನು ಒದಗಿಸುವುದನ್ನು ಒಳಗೊಳ್ಳುತ್ತದೆ;

(ಜಿ) "ಖಾಸಗಿ ಭದ್ರತಾ ಏಜೆನ್ಸಿ" ಎಂದರೆ ಸರ್ಕಾರಿ ಏಜೆನ್ಸಿಯನ್ನು, ಇಲಾಖೆಯನ್ನು ಅಥವಾ ಸಂಸ್ಥೆಯನ್ನು ಹೊರತುಪಡಿಸಿ ಖಾಸಗಿ ಭದ್ರತಾ ರಕ್ಷಕರಿಗೆ ಅಥವಾ ಅವರ ಮೇಲ್ವಿಚಾರಕರಿಗೆ ನೀಡುವ ತರಬೇತಿಯನ್ನು ಒಳಗೊಂಡಂತೆ ಖಾಸಗಿ ಭದ್ರತಾ ಸೇವೆಗಳನ್ನು ಒದಗಿಸುವ ಅಥವಾ ಯಾವುದೇ ಕೈಗಾರಿಕೆ ಅಥವಾ ವ್ಯವಹಾರ ಉದ್ಯಮಕ್ಕೆ ಅಥವಾ ಕಂಪನಿ ಅಥವಾ ಯಾರೇ ಇತರ ವ್ಯಕ್ತಿಗೆ ಅಥವಾ ಸ್ವತ್ತಿಗೆ ಖಾಸಗಿ ಭದ್ರತಾ ಕಾವಲುಪಡೆ ಒದಗಿಸುವ ವ್ಯವಹಾರದಲ್ಲಿ ನಿರತವಾದ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಎಂದು ಅರ್ಥ;

(ಎಚ್) "ಖಾಸಗಿ ಭದ್ರತಾ ಕಾವಲುಗಾರ" ಎಂದರೆ ಶಸ್ತ್ರಗಳಿಲ್ಲದೆ ಅಥವಾ ಶಸ್ತ್ರಗಳೊಂದಿಗೆ ಬೇರೆ ವ್ಯಕ್ತಿಗೆ ಅಥವಾ ಸ್ವತ್ತಿಗೆ ಅಥವಾ ಅವೆರಡಕ್ಕೂ ಖಾಸಗಿ ಭದ್ರತೆಯನ್ನು ಒದಗಿಸುವ ವ್ಯಕ್ತಿ ಮತ್ತು ಅದರಲ್ಲಿ ಮೇಲ್ವಿಚಾರಕನೂ ಒಳಗೊಳ್ಳುತ್ತಾನೆ;

(ಐ) ಒಂದು ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ, "ರಾಜ್ಯ ಸರ್ಕಾರ" ಎಂಬುದು ಸಂವಿಧಾನದ 239ನೆಯ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯಿಂದ ನೇಮಕಗೊಂಡ ಆ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನನ್ನು ಒಳಗೊಳ್ಳುತ್ತದೆ.

**3. ನಿಯಂತ್ರಣ ಪ್ರಾಧಿಕಾರಿಯ ನೇಮಕ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯದ ಗೃಹ ಇಲಾಖೆಯಲ್ಲಿನ ಜಂಟಿ ಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ಅಥವಾ ಅದಕ್ಕೆ ಸಮನಾದ ಅಧಿಕಾರಿಯೊಬ್ಬನನ್ನು ನಿಯಂತ್ರಣ ಪ್ರಾಧಿಕಾರಿಯನ್ನಾಗಿ ಅಧಿಸೂಚನೆಯ ಮೂಲಕ ಹೆಸರಿಸತಕ್ಕದ್ದು.

(2) ನಿಯಂತ್ರಣ ಪ್ರಾಧಿಕಾರಿಯು ತನ್ನ ಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವುದಕ್ಕಾಗಿ, ರಾಜ್ಯ ಸರ್ಕಾರವು, ಅಗತ್ಯವೆಂದು ಪರಿಗಣಿಸುವಂಥ ಇತರ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯನ್ನು ಅವನಿಗೆ ಒದಗಿಸಬಹುದು.

**4. ವ್ಯಕ್ತಿಗಳು ಅಥವಾ ಖಾಸಗಿ ಭದ್ರತಾ ಏಜೆನ್ಸಿಯು ಲೈಸೆನ್ಸು ಇಲ್ಲದೆ ಖಾಸಗಿ ಭದ್ರತಾ ರಕ್ಷಕನನ್ನು ನಿಯೋಜಿಸಬಾರದು ಅಥವಾ ಒದಗಿಸಬಾರದು.–** ಈ ಅಧಿನಿಯಮದ ಮೇರೆಗೆ ನೀಡಿದ ಲೈಸೆನ್ಸ್‌ನ್ನು

ಹೊಂದಿರುವ ಹೊರತು, ಯಾರೇ ವ್ಯಕ್ತಿಯು, ಖಾಸಗಿ ಭದ್ರತಾ ಏಜೆನ್ಸಿಯ ವ್ಯವಹಾರವನ್ನು ಪ್ರಾರಂಭಿಸತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ:

ಪರಂತು, ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಖಾಸಗಿ ಭದ್ರತಾ ಏಜೆನ್ಸಿಯ ವ್ಯವಹಾರವನ್ನು ನಡೆಸುತ್ತಿರುವ ವ್ಯಕ್ತಿಯು, ಅಂಥ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಮತ್ತು ಅಂಥ ಲೈಸೆನ್ಸ್‌ಗಾಗಿ ಸದರಿ ಒಂದು ವರ್ಷದ ಅವಧಿಯೊಳಗೆ ಅವನು ಅರ್ಜಿಯನ್ನು ಸಲ್ಲಿಸಿದ್ದಲ್ಲಿ, ಅಂಥ ಅರ್ಜಿಯು ವಿಲೆಯಾಗುವ ತನಕ ವ್ಯವಹಾರವನ್ನು ಮುಂದುವರೆಸಬಹುದು:

ಮತ್ತೂ ಪರಂತು, ನಿಯಂತ್ರಣ ಪ್ರಾಧಿಕಾರಿಯ ಅನುಮತಿ ಪಡೆಯದೆ ಖಾಸಗಿ ಭದ್ರತಾ ಏಜೆನ್ಸಿಯು ಹೊರದೇಶಗಳಲ್ಲಿ ಖಾಸಗಿ ಭದ್ರತೆಯನ್ನು ಒದಗಿಸತಕ್ಕದ್ದಲ್ಲ, ಹಾಗೆ ಅನುಮತಿಯನ್ನು ಮಂಜೂರು ಮಾಡುವ ಮುಂಚೆ ಪ್ರಾಧಿಕಾರಿಯು ಕೇಂದ್ರ ಸರ್ಕಾರದೊಡನೆ ಸಮಾಲೋಚಿಸತಕ್ಕದ್ದು.

**5. ಲೈಸೆನ್ಸ್‌ಗಾಗಿ ಅರ್ಹತೆ.–** ಈ ಅಧಿನಿಯಮದ ಮೇರೆಗೆ ಲೈಸೆನ್ಸ್ ನೀಡಿಕೆಗೆ ಸಲ್ಲಿಸಿದ ಅರ್ಜಿಯನ್ನು, ವ್ಯಕ್ತಿಯ ಪೂರ್ವ ವೃತ್ತಾಂತಗಳ ಯುಕ್ತ ಪರಿಶೀಲನೆಯ ತರುವಾಯ ಮಾತ್ರವೇ ಪರಿಗಣಿಸತಕ್ಕದ್ದು.

**6. ಲೈಸೆನ್ಸ್‌ಗೆ ಅರ್ಹರಾಗದ ವ್ಯಕ್ತಿಗಳು.–** (1) ಒಬ್ಬ ವ್ಯಕ್ತಿಯನ್ನು, ಅವನು,–

(ಎ) ಅವಿಮುಕ್ತ ದಿವಾಳಿಯು ಒಳಗೊಂಡಂತೆ (ಕಂಪನಿಗೆ ಸಂಬಂಧಿಸಿದಂತೆ ಯಾವುದೇ ಮೋಸ ಅಥವಾ ಅಕ್ರಮ ಎಸಗಿದ್ದು) ಕಂಪನಿಯ ಪ್ರವರ್ಧನೆಗೆ, ರಚನೆಗೆ ಅಥವಾ ನಿರ್ವಹಣೆಗೆ ಸಂಬಂಧಿಸಿದ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಅಥವಾ

(ಬಿ) ಯಾವ ಅಪರಾಧಕ್ಕೆ ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದ ಕಾರಾವಾಸದ ಶಿಕ್ಷೆಯನ್ನು ನಿಯಮಿಸಲಾಗಿದೆಯೋ ಆ ಅಪರಾಧದ ಅಪರಾಧಿಯೆಂದು ಸಕ್ಷಮ ನ್ಯಾಯಾಲಯದಿಂದ ನಿರ್ಣೀತನಾಗಿದ್ದರೆ; ಅಥವಾ

(ಸಿ) ರಾಷ್ಟ್ರೀಯ ಭದ್ರತೆಗೆ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ಬೆದರಿಕೆಯನ್ನುಂಟು ಮಾಡುವ ಚಟುವಟಿಕೆಗಳ ಕಾರಣದಿಂದಾಗಿ ಯಾವುದೇ ಕಾನೂನಿನ ಮೇರೆಗೆ ನಿಷೇಧಿಸಿದ ಯಾವುದೇ ಸಂಘಟನೆಯೊಂದಿಗೆ ಅಥವಾ ಸಂಘದೊಂದಿಗೆ ಸಂಬಂಧ ಹೊಂದಿದ್ದರೆ ಅಥವಾ ರಾಷ್ಟ್ರೀಯ ಭದ್ರತೆಗೆ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ಬಾಧಕವಾಗುವ ಚಟುವಟಿಕೆಗಳಲ್ಲಿ ಅಂಥ ವ್ಯಕ್ತಿಯು ತೊಡಗಿರುವ ಬಗ್ಗೆ ಮಾಹಿತಿಯಿದ್ದರೆ; ಅಥವಾ

(ಡಿ) ದುರ್ನಡತೆ ಅಥವಾ ನೈತಿಕ ಅಧಃಪತನದ ಕಾರಣದಿಂದ ಆತನನ್ನು ಸರ್ಕಾರಿ ಸೇವೆಯಿಂದ ವಜಾ ಮಾಡಿದ್ದರೆ ಅಥವಾ ತೆಗೆದುಹಾಕಿದ್ದರೆ

– ಈ ಅಧಿನಿಯಮದ ಮೇರೆಗೆ ಲೈಸೆನ್ಸ್ ನೀಡಿಕೆಗಾಗಿ ಪರಿಗಣಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ಕಂಪನಿಯನ್ನು, ಫರ್ಮ್‌ನ್ನು ಅಥವಾ ವ್ಯಕ್ತಿಗಳ ಸಂಘವನ್ನು, ಅದು ಭಾರತದಲ್ಲಿ ನೋಂದಣಿಯಾಗದಿದ್ದಲ್ಲಿ, ಅಥವಾ ಭಾರತದ ನಾಗರಿಕನಾಗಿರದ ಮಾಲೀಕನನ್ನು ಅಥವಾ ಬಹುಸಂಖ್ಯಾತ ಷೇರುದಾರನನ್ನು, ಪಾಲುದಾರನನ್ನು ಅಥವಾ ನಿರ್ದೇಶಕನನ್ನು ಹೊಂದಿದ್ದಲ್ಲಿ ಲೈಸೆನ್ಸ್ ನೀಡುವುದಕ್ಕಾಗಿ ಪರಿಗಣಿಸತಕ್ಕದ್ದಲ್ಲ.

**7. ಲೈಸೆನ್ಸ್‌ನ ಮಂಜೂರಾತಿಗಾಗಿ ಅರ್ಜಿ.–** (1) ಖಾಸಗಿ ಭದ್ರತಾ ಏಜೆನ್ಸಿಗೆ ಲೈಸೆನ್ಸ್ ಮಂಜೂರಾತಿ ಕೋರಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಅರ್ಜಿಯನ್ನು ನಿಯಂತ್ರಣ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು.

(2) ಅರ್ಜಿದಾರನು 6ನೇ ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಸಂಬಂಧಿಸಿದ ವಿವರಗಳನ್ನು, ತನ್ನ ಖಾಸಗಿ ಭದ್ರತಾ ರಕ್ಷಕರಿಗೆ ಮತ್ತು ಮೇಲ್ವಿಚಾರಕರಿಗೆ 9ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಿದ ತರಬೇತಿಯು ಲಭ್ಯವಿರುವುದನ್ನು, 11ನೇ ಪ್ರಕರಣದ ಮೇರೆಗೆ ಷರತ್ತುಗಳನ್ನು ಈಡೇರಿಸುವುದನ್ನು ಸುನಿಶ್ಚಿತಪಡಿಸುವ ಮತ್ತು ಅರ್ಜಿದಾರನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಅಥವಾ ಕಾನೂನು ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣಗಳ ವಿವರಗಳನ್ನು ಒಳಗೊಂಡಿರುವ ಅಫಿಡಾವಿಟ್‌ನ್ನು ಸಲ್ಲಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ, ಸಲ್ಲಿಸಲಾಗುವ ಅರ್ಜಿಯೊಂದಿಗೆ,–

(ಎ) ರಾಜ್ಯದ ಒಂದು ಜಿಲ್ಲೆಯಲ್ಲಿ ಖಾಸಗಿ ಭದ್ರತಾ ಏಜೆನ್ಸಿಯು ಕಾರ್ಯ ನಿರ್ವಹಿಸುತ್ತಿದ್ದರೆ ಐದು ಸಾವಿರ ರೂಗಳು;

(ಬಿ) ರಾಜ್ಯದ ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ಆದರೆ ಐದು ಜಿಲ್ಲೆಗಳವರೆಗೆ ಏಜೆನ್ಸಿಯು ಕಾರ್ಯ ನಿರ್ವಹಿಸುತ್ತಿದ್ದರೆ ಹತ್ತು ಸಾವಿರ ರೂಗಳು; ಮತ್ತು

(ಸಿ) ಇಡೀ ರಾಜ್ಯದಲ್ಲಿ ಅದು ಕಾರ್ಯನಿರ್ವಹಿಸುತ್ತಿದ್ದರೆ ಇಪ್ಪತ್ತೈದು ಸಾವಿರ ರೂಗಳ ಶುಲ್ಕವು ಇರತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ನಿಯಂತ್ರಣ ಪ್ರಾಧಿಕಾರಿಯು, ತಾನು ಅಗತ್ಯವೆಂದು ಪರಿಗಣಿಸುವಂಥ ವಿಚಾರಣೆಗಳನ್ನು ಮಾಡಿದ ತರುವಾಯ ಮತ್ತು ಸಂಬಂಧಿಸಿದ ಪೊಲೀಸ್ ಪ್ರಾಧಿಕಾರಿಯಿಂದ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆದ ತರುವಾಯ, ಲಿಖಿತ ಆದೇಶದ ಮೂಲಕ, ಪೂರ್ಣ ವಿವರಗಳನ್ನು ಒಳಗೊಂಡ ಅರ್ಜಿಯನ್ನು ಮತ್ತು ನಿಯಮಿಸಲಾದ

ಶುಲ್ಕವನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ಲೈಸೆನ್ಸ್‌ನ್ನು ಮಂಜೂರು ಮಾಡಬಹುದು ಅಥವಾ ಅದನ್ನು ಮಂಜೂರು ಮಾಡಲು ನಿರಾಕರಿಸಬಹುದು:

ಪರಂತು,–

(ಎ) ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಅರ್ಜಿದಾರರಿಗೆ ನೀಡಿದ ಹೊರತು; ಮತ್ತು

(ಬಿ) ಅದರಲ್ಲಿ ಲೈಸೆನ್ಸ್‌ನ್ನು ನಿರಾಕರಿಸಿದುದಕ್ಕೆ ಕಾರಣಗಳನ್ನು ನಮೂದಿಸಿದ ಹೊರತು

– ನಿರಾಕರಣೆಯ ಆದೇಶವನ್ನು ಮಾಡತಕ್ಕದ್ದಲ್ಲ.

(5) ಈ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಲೈಸೆನ್ಸು,–

(ಎ) 13ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅದನ್ನು ರದ್ದುಪಡಿಸಿದ ಹೊರತು ಐದು ವರ್ಷಗಳ ಅವಧಿಯವರೆಗೆ ಅದು ಸಿಂಧುವಾಗಿರತಕ್ಕದ್ದು;

(ಬಿ) ಐದು ವರ್ಷಗಳು ಮುಕ್ತಾಯವಾದ ತರುವಾಯ, ನಿಯಮಿಸಬಹುದಾದಂಥ ಶುಲ್ಕ ಸಂದಾಯ ಮಾಡಿದ ನಂತರ ಮುಂದಿನ ಐದು ವರ್ಷಗಳ ಅವಧಿಗಾಗಿ, ಕಾಲಕಾಲಕ್ಕೆ ಅದನ್ನು ನವೀಕರಿಸಬಹುದು; ಮತ್ತು

(ಸಿ) ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಡತಕ್ಕದ್ದು.

**8. ಲೈಸೆನ್ಸ್‌ನ ನವೀಕರಣ.–** (1) ಲೈಸೆನ್ಸ್‌ನ ನವೀಕರಣಕ್ಕಾಗಿ, ಅದರ ಸಿಂಧುತ್ವದ ಅವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮುಂಚೆ ನಲವತ್ತೈದು ದಿನಗಳಿಗೆ ಕಡಿಮೆ ಇಲ್ಲದಂತೆ, ನಿಯಮಿಸಬಹುದಾದಂಥ ನಮೂನೆಯಲ್ಲಿ ಈ ಅಧಿನಿಯಮದ 6, 7 ಮತ್ತು 11ನೇ ಪ್ರಕರಣಗಳ ಮೇರೆಗೆ ಅಗತ್ಯಪಡಿಸಿದ ಅವಶ್ಯಕ ಶುಲ್ಕ ಮತ್ತು ಇತರ ದಸ್ತಾವೇಜುಗಳೊಂದಿಗೆ ಅರ್ಜಿಯನ್ನು ನಿಯಂತ್ರಣ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು.

(2) ನಿಯಂತ್ರಣ ಪ್ರಾಧಿಕಾರಿಯು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಲೈಸೆನ್ಸ್‌ನ ನವೀಕರಣಕ್ಕಾಗಿ ಎಲ್ಲ ವಿಧದಲ್ಲಿಯೂ ಪೂರ್ಣವಾಗಿರುವ ಅರ್ಜಿಯ ಮೇಲೆ ಆದೇಶವನ್ನು ಮಾಡತಕ್ಕದ್ದು.

(3) ನಿಯಂತ್ರಣ ಪ್ರಾಧಿಕಾರಿಯು (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ತಾನು ಅಗತ್ಯವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ಮಾಡಿದ ತರುವಾಯ ಮತ್ತು ಲಿಖಿತದಲ್ಲಿ ಆದೇಶವನ್ನು ಮಾಡುವುದರ ಮೂಲಕ ಲೈಸೆನ್ಸ್‌ನ್ನು ನವೀಕರಿಸಬಹುದು ಅಥವಾ ಅದನ್ನು ನವೀಕರಿಸಲು ನಿರಾಕರಿಸಬಹುದು:

ಪರಂತು, ಅರ್ಜಿದಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು ನಿರಾಕರಣೆಯ ಆದೇಶವನ್ನು ಮಾಡತತಕ್ಕದ್ದಲ್ಲ.

**9. ಕಾರ್ಯಾಚರಣೆಯ ಪ್ರಾರಂಭ ಮತ್ತು ಮೇಲ್ವಿಚಾರಕರನ್ನು ನೇಮಿಸಿಕೊಳ್ಳಲು ಷರತ್ತುಗಳು.–** (1) ಪ್ರತಿಯೊಂದು ಖಾಸಗಿ ಭದ್ರತಾ ಏಜೆನ್ಸಿಯು, ಲೈಸೆನ್ಸ್‌ನ್ನು ಪಡೆದುಕೊಂಡ ಆರು ತಿಂಗಳುಗಳೊಳಗೆ ಅದರ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸತಕ್ಕದ್ದು.

(2) ಪ್ರತಿ ಖಾಸಗಿ ಭದ್ರತಾ ಏಜೆನ್ಸಿಯು ನಿಯಮಿಸಬಹುದಾದಂತೆ, ತರಬೇತಿ ಮತ್ತು ಕೌಶಲಗಳನ್ನು ತನ್ನ ಖಾಸಗಿ ಭದ್ರತಾ ರಕ್ಷಕರಿಗೆ ಮತ್ತು ಮೇಲ್ವಿಚಾರಕರಿಗೆ ನೀಡಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು:

ಪರಂತು, ಖಾಸಗಿ ಭದ್ರತಾ ಏಜೆನ್ಸಿಯ ವ್ಯವಹಾರವನ್ನು ನಡೆಸುವ ವ್ಯಕ್ತಿಯು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ, ಅಂಥ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ತನ್ನ ಭದ್ರತಾ ರಕ್ಷಕರಿಗೆ ಮತ್ತು ಮೇಲ್ವಿಚಾರಕರಿಗೆ ಅಗತ್ಯವಾದ ತರಬೇತಿಯನ್ನು ನೀಡಿರುವುದರ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

(3) ಪ್ರತಿ ಖಾಸಗಿ ಭದ್ರತಾ ಏಜೆನ್ಸಿಯು, ಲೈಸೆನ್ಸ್ ನೀಡಿಕೆಯ ದಿನಾಂಕದಿಂದ ಅರವತ್ತು ದಿವಸಗಳೊಳಗೆ, ನಿಯಮಿಸಬಹುದಾದಷ್ಟು ಸಂಖ್ಯೆಯ ಮೇಲ್ವಿಚಾರಕರನ್ನು ನಿಯೋಜಿಸಿಕೊಳ್ಳತಕ್ಕದ್ದು.

(4) ಖಾಸಗಿ ಭದ್ರತಾ ಏಜೆನ್ಸಿಯು, ಯಾರೇ ವ್ಯಕ್ತಿಯನ್ನು, ಅವನು 10ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರ್ಣಗೊಳಿಸಿದ ಹೊರತು, ಮೇಲ್ವಿಚಾರಕನನ್ನಾಗಿ ನಿಯೋಜಿಸಿಕೊಳ್ಳತಕ್ಕದ್ದಲ್ಲ ಅಥವಾ ನೇಮಿಸಿಕೊಳ್ಳತಕ್ಕದ್ದಲ್ಲ.

(5) ಖಾಸಗಿ ಭದ್ರತಾ ರಕ್ಷಕರ ಮೇಲ್ವಿಚಾರಕನನ್ನು ನೇಮಿಸಿಕೊಳ್ಳುವಾಗ, ಪ್ರತಿಯೊಂದು ಖಾಸಗಿ ಭದ್ರತಾ ಏಜೆನ್ಸಿಯು ಮೂರು ವರ್ಷಗಳ ಅವಧಿಗೆ ಕಡಿಮೆಯಿಲ್ಲದಂತೆ, ಭೂಸೇನೆಯಲ್ಲಿ, ನೌಕಾದಳದಲ್ಲಿ, ವಾಯುದಳದಲ್ಲಿ ಅಥವಾ ಕೇಂದ್ರದ ಯಾವುದೇ ಇತರ ಸಶಸ್ತ್ರ ದಳದಲ್ಲಿ ಅಥವಾ ಸಶಸ್ತ್ರ ಪೊಲೀಸ್ ಪಡೆಯನ್ನು ಮತ್ತು ಗೃಹರಕ್ಷಕದಳವನ್ನು ಒಳಗೊಂಡಂತೆ ರಾಜ್ಯ ಪೊಲೀಸ್ ದಳದಲ್ಲಿ ಸೇವೆ ಸಲ್ಲಿಸಿದ ಅನುಭವವಿರುವ ವ್ಯಕ್ತಿಗೆ ಪ್ರಾಶಸ್ತ್ಯ ನೀಡತಕ್ಕದ್ದು.

**10. ಖಾಸಗಿ ಭದ್ರತಾ ರಕ್ಷಕನಾಗಲು ಅರ್ಹತೆ.–** (1) ಖಾಸಗಿ ಭದ್ರತಾ ಏಜೆನ್ಸಿಯು ಖಾಸಗಿ ಭದ್ರತಾ ರಕ್ಷಕನನ್ನಾಗಿ ಯಾರೇ ವ್ಯಕ್ತಿಯನ್ನು,–

(ಎ) ಅವನು ಭಾರತದ ನಾಗರಿಕನಾಗಿರುವ ಹೊರತು ಅಥವಾ ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದೇಶದ ನಾಗರಿಕನಾಗಿರುವ ಹೊರತು;

(ಬಿ) ಅವನು, ಹದಿನೆಂಟು ವರ್ಷಗಳನ್ನು ಪೂರೈಸಿದ್ದ ಆದರೆ ಅರವತ್ತೈದು ವರ್ಷಗಳ ವಯಸ್ಸನ್ನು ಮೀರದಿದ್ದ ಹೊರತು;

(ಸಿ) ಅವನು, ನಿಯಮಿಸಬಹುದಾದಂಥ ರೀತಿಯಲ್ಲಿ, ಏಜೆನ್ಸಿಗೆ ತನ್ನ ನಡತೆ ಮತ್ತು ಪೂರ್ವ ವೃತ್ತಾಂತಗಳ ಬಗ್ಗೆ ಮನದಟ್ಟು ಮಾಡದ ಹೊರತು;

(ಡಿ) ಅವನು ನಿಯಮಿಸಿದ ಭದ್ರತಾ ತರಬೇತಿಯನ್ನು ಯಶಸ್ವಿಯಾಗಿ ಪೂರೈಸದ ಹೊರತು;

(ಇ) ಅವನು ನಿಯಮಿಸಬಹುದಾದಂಥ ದೈಹಿಕ ಮಟ್ಟವನ್ನು ಪೂರ್ಣಗೊಳಿಸದ ಹೊರತು; ಮತ್ತು

(ಎಫ್) ಅವನು ನಿಯಮಿಸಬಹುದಾದಂಥ ಇತರ ಷರತ್ತುಗಳನ್ನು ಪೂರ್ಣಗೊಳಿಸದ ಹೊರತು

– ನಿಯೋಜಿಸತಕ್ಕದ್ದಲ್ಲ ಅಥವಾ ನೇಮಿಸತಕ್ಕದ್ದಲ್ಲ.

(2) ಸಕ್ಷಮ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿರುವ ಅಥವಾ ಕೇಂದ್ರದ ಯಾವುದೇ ಸಶಸ್ತ್ರ ಪಡೆಗಳಲ್ಲಿ, ರಾಜ್ಯ ಪೊಲೀಸ್ ಸಂಸ್ಥೆಗಳಲ್ಲಿ, ಕೇಂದ್ರ ಅಥವಾ ರಾಜ್ಯ ಸರ್ಕಾರಗಳಲ್ಲಿ ಅಥವಾ ಯಾವುದೇ ಖಾಸಗಿ ಭದ್ರತಾ ಏಜೆನ್ಸಿಯಲ್ಲಿ ಸೇವೆ ಸಲ್ಲಿಸುವಾಗ ದುರ್ನಡತೆ ಅಥವಾ ನೈತಿಕ ಅಧಃಪತನದ ಆಧಾರದ ಮೇಲೆ ಸೇವೆಯಿಂದ ವಜಾಗೊಂಡಿರುವ ಅಥವಾ ತೆಗೆದುಹಾಕಲಾಗಿರುವ ಯಾರೇ ವ್ಯಕ್ತಿಯನ್ನು ಖಾಸಗಿ ಭದ್ರತಾ ರಕ್ಷಕನಾಗಿ ಅಥವಾ ಮೇಲ್ವಿಚಾರಕನನ್ನಾಗಿ ನಿಯೋಜಿಸತಕ್ಕದ್ದಲ್ಲ ಅಥವಾ ನೇಮಿಸತಕ್ಕದ್ದಲ್ಲ.

(3) ಪ್ರತಿಯೊಂದು ಖಾಸಗಿ ಭದ್ರತಾ ಏಜೆನ್ಸಿಯು, ಖಾಸಗಿ ಭದ್ರತಾ ರಕ್ಷಕನನ್ನಾಗಿ ಒಬ್ಬ ವ್ಯಕ್ತಿಯನ್ನು ನೇಮಿಸಿಕೊಳ್ಳುವಾಗ ಈ ಕೆಳಗಿನ ಒಂದರಲ್ಲಿ ಅಥವಾ ಹೆಚ್ಚಿನದರಲ್ಲಿ ಸದಸ್ಯನಾಗಿ ಸೇವೆ ಸಲ್ಲಿಸಿದ ವ್ಯಕ್ತಿಗೆ ಆದ್ಯತೆ ನೀಡತಕ್ಕದ್ದು, ಎಂದರೆ:–

(i) ಭೂಸೇನೆ;

(ii) ನೌಕಾ ದಳ;

(iii) ವಾಯು ದಳ;

(iv) ಒಕ್ಕೂಟದ ಇತರ ಯಾವುದೇ ಸಶಸ್ತ್ರ ಪಡೆಗಳು;

(v) ರಾಜ್ಯಗಳ ಸಶಸ್ತ್ರ ಪೊಲೀಸ್ ಪಡೆಗಳೂ ಸೇರಿದಂತೆ, ಪೊಲೀಸ್; ಮತ್ತು

(vi) ಗೃಹ ರಕ್ಷಕದಳ.

**11. ಲೈಸೆನ್ಸ್‌ನ ಷರತ್ತುಗಳು.–** (1) ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ಯಾವ ಷರತ್ತುಗಳ ಮೇರೆಗೆ ಲೈಸೆನ್ಸ್‌ನ್ನು ಮಂಜೂರು ಮಾಡಬಹುದೋ ಆ ಷರತ್ತುಗಳನ್ನು ನಿಯಮಿಸಲು ನಿಯಮಗಳನ್ನು ರಚಿಸಬಹುದು, ಮತ್ತು ಅಂಥ ಷರತ್ತುಗಳಲ್ಲಿ, ಲೈಸೆನ್ಸುದಾರನು ಪಡೆಯಬೇಕಾದ ತರಬೇತಿಗೆ ಸಂಬಂಧಿಸಿದ ಅಗತ್ಯತೆಗಳನ್ನು, ಏಜೆನ್ಸಿಯನ್ನು ಸ್ಥಾಪಿಸುವ ವ್ಯಕ್ತಿ ಅಥವಾ ವ್ಯಕ್ತಿಗಳ ವಿವರಗಳನ್ನು, ಅವರ ವಿಳಾಸಗಳಲ್ಲಿ ಉಂಟಾಗುವ ಯಾವುದೇ ಬದಲಾವಣೆ, ಅದರ ಆಡಳಿತ ವರ್ಗದ ಬದಲಾವಣೆಗೆ ಸಂಬಂಧಿಸಿದ ಮತ್ತು ಖಾಸಗಿ ಭದ್ರತಾ ಏಜೆನ್ಸಿಯ ಕರ್ತವ್ಯಗಳನ್ನು ಅವರು ನಿರ್ವಹಿಸುವಾಗ ಅಥವಾ ಸಂದರ್ಭಾನುಸಾರ, ಅವರಿಂದ ಖಾಸಗಿ ಭದ್ರತಾ ರಕ್ಷಕನನ್ನಾಗಿ ನಿಯೋಜಿಸಿಕೊಂಡ ಅಥವಾ ನೇಮಕಗೊಂಡವನ ವಿರುದ್ಧ ಮಾಡಲಾದ ಯಾವುದೇ ಕ್ರಿಮಿನಲ್ ಆಪಾದನೆಗೆ ಸಂಬಂಧಿಸಿದ ಮಾಹಿತಿಯನ್ನು ನಿಯಂತ್ರಣ ಪ್ರಾಧಿಕಾರಿಗೆ ಕಾಲಕಾಲಕ್ಕೆ ಒದಗಿಸುವ ಬಾಧ್ಯತೆಯನ್ನು ಒಳಗೊಂಡಿರತಕ್ಕದ್ದು.

(2) 9ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಅಗತ್ಯಪಡಿಸಲಾದ ತರಬೇತಿಯನ್ನು ಖಾಸಗಿ ಭದ್ರತಾ ಏಜೆನ್ಸಿಗಳು ತಮ್ಮ ಭದ್ರತಾ ರಕ್ಷಕರಿಗೆ ನೀಡಿರುವುದನ್ನು ಪರಿಶೀಲಿಸಲು ಮತ್ತು ಅಗತ್ಯ ತರಬೇತಿಯನ್ನು ನೀಡಿರುವುದನ್ನು ಖಚಿತಪಡಿಸಿಕೊಳ್ಳುವ ಷರತ್ತಿಗೆ ಬದ್ಧರಾಗಿರದಂಥ ಖಾಸಗಿ ಭದ್ರತಾ ಏಜೆನ್ಸಿಗಳ ಲೈಸೆನ್ಸ್‌ನ್ನು ಮುಂದುವರಿಸಬೇಕೆ ಅಥವಾ ಬೇಡವೆ ಎಂಬುದನ್ನು ಪುನರವಲೋಕಿಸಲು ರಾಜ್ಯ ಸರ್ಕಾರವು ನಿಯಮಗಳಲ್ಲಿ ಉಪಬಂಧ ಕಲ್ಪಿಸಬಹುದು.

**12. ಲೈಸೆನ್ಸ್‌ನ್ನು ಪ್ರದರ್ಶಿಸುವುದು.–** ಪ್ರತಿಯೊಂದು ಖಾಸಗಿ ಭದ್ರತಾ ಏಜೆನ್ಸಿಯು ಅದರ ವ್ಯವಹಾರದ ಎದ್ದುಕಾಣುವ ಸ್ಥಳದಲ್ಲಿ ಅದರ ಲೈಸೆನ್ಸ್‌ನ್ನು ಅಥವಾ ಅದರ ಪ್ರತಿಯನ್ನು ಪ್ರದರ್ಶಿಸತಕ್ಕದ್ದು.

**13. ಲೈಸೆನ್ಸ್‌ನ ಅಮಾನತು ಮತ್ತು ರದ್ದಿಯಾತಿ.–** (1) ನಿಯಂತ್ರಣ ಪ್ರಾಧಿಕಾರಿಯು ಕೆಳಗಿನ ಯಾವುದೇ ಒಂದು ಅಥವಾ ಹೆಚ್ಚಿನ ಕಾರಣಗಳ ಮೇಲೆ ಯಾವುದೇ ಲೈಸೆನ್ಸ್‌ನ್ನು ರದ್ದುಪಡಿಸಬಹುದು, ಎಂದರೆ:–

(ಎ) ತಪ್ಪು ನಿರೂಪಣೆ ಮಾಡಿ ಅಥವಾ ಮಹತ್ವದ ಸಂಗತಿಗಳ ಮರೆಮಾಚಿ ಲೈಸೆನ್ಸ್‌ನ್ನು ಪಡೆದುಕೊಂಡಿರುವುದು;

(ಬಿ) ಲೈಸೆನ್ಸುದಾರನು ಸುಳ್ಳು ದಸ್ತಾವೇಜುಗಳನ್ನು ಅಥವಾ ಫೋಟೋಗಳನ್ನು ಬಳಸಿರುವುದು;

(ಸಿ) ಲೈಸೆನ್ಸುದಾರನು ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳನ್ನು ಅಥವಾ ಲೈಸೆನ್ಸ್‌ನ ಯಾವುವೇ ಷರತ್ತುಗಳನ್ನು ಉಲ್ಲಂಘಿಸಿರುವುದು;

(ಡಿ) ಲೈಸೆನ್ಸುದಾರನು ಯಾವುದೇ ಕೈಗಾರಿಕಾ ಅಥವಾ ವ್ಯವಹಾರ ಉದ್ಯಮಕ್ಕೆ ಅಥವಾ ಕಂಪನಿ ಅಥವಾ ಇತರ ಯಾರೇ ವ್ಯಕ್ತಿಗೆ ಖಾಸಗಿ ಭದ್ರತಾ ಏಜೆನ್ಸಿಯಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುವ ಸಮಯದಲ್ಲಿ ಅವನು ಪಡೆದುಕೊಂಡ ಮಾಹಿತಿಯನ್ನು ದುರುಪಯೋಗ ಪಡಿಸಿಕೊಂಡಿರುವುದು;

(ಇ) ಲೈಸೆನ್ಸುದಾರನು ಯಾವುದೇ ಲೆಟರ್‌ಹೆಡ್, ಜಾಹೀರಾತು ಅಥವಾ ಇತರ ಯಾವುದೇ ಮುದ್ರಿತ ವಿಷಯವನ್ನು ಬಳಸುವುದರ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ ಖಾಸಗಿ ಭದ್ರತಾ ಏಜೆನ್ಸಿಯು ಸರ್ಕಾರದ ಒಂದು ಸಂಸ್ಥೆಯಾಗಿರುವುದಾಗಿ ನಿರೂಪಣೆ ಮಾಡುವುದು ಅಥವಾ ಯಾರ ಹೆಸರಿಗೆ ಲೈಸೆನ್ಸ್‌ನ್ನು ಮಂಜೂರು ಮಾಡಲಾಗಿದೆಯೋ ಅದರಿಂದ ವಿಭಿನ್ನವಾದ ಹೆಸರನ್ನು ಅಂಥ ಏಜೆನ್ಸಿಯು ಬಳಸಿರುವುದು ಅಥವಾ ಬಳಸಿಕೊಳ್ಳುತ್ತಿರುವುದು;

(ಎಫ್) ಲೈಸೆನ್ಸುದಾರನು ಲೋಕನೌಕರನಂತೆ ನಟಿಸಿರುವುದು ಅಥವಾ ನಟಿಸುತ್ತಿರುವುದು ಅಥವಾ ಬೇರೊಬ್ಬ ವ್ಯಕ್ತಿಯು ಹಾಗೆ ನಟಿಸಲು ಅನುಮತಿಸಿರುವುದು ಅಥವಾ ಅನುಮತಿಸುತ್ತಿರುವುದು ಅಥವಾ ನೆರವು ನೀಡುವುದು ಅಥವಾ ನೀಡುತ್ತಿರುವುದು ಅಥವಾ ದುಷ್ಪ್ರೇರಿಸುವುದು ಅಥವಾ ದುಷ್ಪ್ರೇರಿಸುತ್ತಿರುವುದು;

(ಜಿ) ಖಾಸಗಿ ಭದ್ರತಾ ಏಜೆನ್ಸಿಯು ತನ್ನ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಲು ಅಥವಾ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮೇಲ್ವಿಚಾರಕರನ್ನು ನಿಯೋಜಿಸಲು ವಿಫಲಗೊಂಡಿರುವುದು;

(ಎಚ್) ಲೈಸೆನ್ಸುದಾರನು, ಯಾರೇ ವ್ಯಕ್ತಿಗೆ, ಒಪ್ಪಿಕೊಂಡ ಸೇವೆಗಳನ್ನು ಒದಗಿಸಲು ಉದ್ದೇಶಪೂರ್ವಕವಾಗಿ ವಿಫಲವಾಗುವುದು ಅಥವಾ ವಿಫಲವಾಗಿರುವುದು ಅಥವಾ ನಿರಾಕರಿಸುವುದು ಅಥವಾ ನಿರಾಕರಿಸಿರುವುದು;

(ಐ) ಲೈಸೆನ್ಸುದಾರನು, ನ್ಯಾಯಾಲಯದ ಆದೇಶ ಅಥವಾ ಕಾನೂನುಸಮ್ಮತ ಪ್ರಾಧಿಕಾರದ ಆದೇಶವನ್ನು ಉಲ್ಲಂಘಿಸುವ ಯಾವುದೇ ಕಾರ್ಯವನ್ನು ಮಾಡಿರುವುದು ಅಥವಾ ಯಾವುದೇ ಅಂಥ ಆದೇಶವನ್ನು ಉಲ್ಲಂಘಿಸಲು ಯಾರೇ ವ್ಯಕ್ತಿಗೆ ಸಲಹೆ ನೀಡುವುದು ಅಥವಾ ನೀಡುತ್ತಿರುವುದು, ಅಥವಾ ಪ್ರೋತ್ಸಾಹಿಸುವುದು ಅಥವಾ ಪ್ರೋತ್ಸಾಹಿಸುತ್ತಿರುವುದು ಅಥವಾ ನೆರವು ನೀಡುವುದು ಅಥವಾ ನೀಡುತ್ತಿರುವುದು;

(ಜೆ) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಹೊರಡಿಸಿದ ಅಧಿಸೂಚನೆಯ ಮೂಲಕ ಮಾರ್ಪಾಡು ಮಾಡಬಹುದಾದಂತಹ ಮತ್ತು ಅನುಸೂಚಿಯಲ್ಲಿ ನೀಡಿದ ಅಧಿನಿಯಮಗಳ ಉಪಬಂಧಗಳನ್ನು ಲೈಸೆನ್ಸುದಾರನು ಉಲ್ಲಂಘಿಸಿರುವುದು;

(ಕೆ) ಖಾಸಗಿ ಭದ್ರತಾ ಏಜೆನ್ಸಿಯು ಒದಗಿಸಿದ ಖಾಸಗಿ ಭದ್ರತಾ ರಕ್ಷಕ ಅಥವಾ ರಕ್ಷಕರು,–

(i) ಖಾಸಗಿ ಭದ್ರತೆಯನ್ನು ಒದಗಿಸಲು ವಿಫಲರಾಗಿರುವ ಅಥವಾ ಅಂಥ ಭದ್ರತೆಯನ್ನು ಒದಗಿಸದಿರಲು ತೀರಾ ನಿರ್ಲಕ್ಷತೆಯನ್ನು ತೋರಿಸುವಂತಹ ತಪ್ಪುಗಾರರಾಗಿರುವ;

(ii) ವಿಶ್ವಾಸದ್ರೋಹ ಮಾಡಿರುವ ಅಥವಾ ಅವರು ರಕ್ಷಿಸಬೇಕಾದ ಸ್ವತ್ತನ್ನು ಅಥವಾ ಅದರ ಭಾಗವನ್ನು ದುರುಪಯೋಗಪಡಿಸಿಕೊಂಡಿರುವ;

(iii) ರೂಢಿಗತವಾಗಿ ಕುಡಿಯುವುದು ಅಥವಾ ಅಶಿಸ್ತು ಕಂಡುಬಂದಿರುವ;

(iv) ಅಪರಾಧಗಳನ್ನು ಮಾಡಿರುವುದರಲ್ಲಿ ಭಾಗಿಯಾಗಿರುವರೆಂದು ಕಂಡುಬಂದಿರುವ; ಅಥವಾ

(v) ತಮ್ಮ ಅಧೀನಕ್ಕೆ ಒಪ್ಪಿಸಿರುವ ವ್ಯಕ್ತಿಯ ಅಥವಾ ಸ್ವತ್ತಿನ ಸಂಬಂಧದಲ್ಲಿ ಅಪರಾಧಕ್ಕೆ ಪರೋಕ್ಷವಾಗಿ ಸಮ್ಮತಿಸುವ ಅಥವಾ ದುಷ್ಪ್ರೇರಿಸುವ

– ಪ್ರಸಂಗಗಳು ಪುನರಾವರ್ತನೆ ಆಗಿರುವುದು.

(ಎಲ್) ಲೈಸೆನ್ಸುದಾರನು ರಾಷ್ಟ್ರೀಯ ಭದ್ರತೆಗೆ ಬೆದರಿಕೆಯುಂಟು ಮಾಡುವ ಯಾವುದೇ ಕಾರ್ಯವನ್ನು ಮಾಡಿರುವುದು ಅಥವಾ ಪೊಲೀಸ್ ಅಥವಾ ಇತರ ಪ್ರಾಧಿಕಾರಕ್ಕೆ ಅವರ ಕರ್ತವ್ಯಗಳ ನಿರ್ವಹಣೆಯಲ್ಲಿ ನೆರವನ್ನು ನೀಡದಿರುವುದು ಅಥವಾ ರಾಷ್ಟ್ರೀಯ ಭದ್ರತೆ ಅಥವಾ ಸಾರ್ವಜನಿಕ ಸುರಕ್ಷತೆ ಅಥವಾ ಕಾನೂನು ಮತ್ತು ಸುವ್ಯವಸ್ಥೆಗೆ ಬಾಧಕವನ್ನುಂಟು ಮಾಡುವ ರೀತಿಯಲ್ಲಿ ವರ್ತಿಸುವುದು.

(2) ನಿಯಂತ್ರಣ ಪ್ರಾಧಿಕಾರಿಯು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, (1)ನೇ ಉಪಪ್ರಕರಣದಲ್ಲಿ ನಮೂದಿಸಿದ ಯಾವುದೇ ಕಾರಣದ ಮೇಲೆ ಲೈಸೆನ್ಸನ್ನು ರದ್ದುಪಡಿಸುವ ಪ್ರಶ್ನೆಯು ಇತ್ಯರ್ಥವಾಗುವವರೆಗೆ, ನಿಯಂತ್ರಣ ಪ್ರಾಧಿಕಾರಿಯು ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮೂವತ್ತು ದಿನಗಳಿಗೆ ಹೆಚ್ಚಾಗದಂಥ ಅವಧಿಗೆ ಲೈಸೆನ್ಸಿನ ಚಾಲ್ತಿಯನ್ನು ಅಮಾನತುಗೊಳಿಸುವುದು ಅಗತ್ಯವೆಂದು ಅವನಿಗೆ ಮನವರಿಕೆಯಾದರೆ ಅವನು ಹಾಗೆ ಮಾಡಬಹುದು

ಮತ್ತು ಅಂಥ ಆದೇಶದ ನೀಡಿಕೆಯ ದಿನಾಂಕದಿಂದ ಹದಿನೈದು ದಿನಗಳೊಳಗೆ ರದ್ದಿಯಾತಿಯ ಪ್ರಶ್ನೆಯನ್ನು, ನಿರ್ಧರಿಸುವವರೆಗೆ ಲೈಸೆನ್ಸಿನ ಅಮಾನತನ್ನು ಏಕೆ ವಿಸ್ತರಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸುವಂತೆ ಲೈಸೆನ್ಸುದಾರನನ್ನು ಅಗತ್ಯಪಡಿಸಬಹುದು.

(3) ಲೈಸೆನ್ಸ್‌ನ ಅಮಾನತ್ತಿನ ಅಥವಾ ರದ್ದಿಯಾತಿಯ ಪ್ರತಿಯೊಂದು ಆದೇಶವು ಲಿಖಿತದಲ್ಲಿ ಇರತಕ್ಕದ್ದು ಮತ್ತು ಅಂಥ ಅಮಾನತು ಅಥವಾ ರದ್ದಿಯಾತಿ ಕಾರಣಗಳನ್ನು ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಬಾಧಿತ ವ್ಯಕ್ತಿಗೆ ನೀಡತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸ್‌ನ ರದ್ದಿಯಾತಿಯ ಆದೇಶವನ್ನು, ಸಂಬಂಧಿಸಿದ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದ ಹೊರತು ಮಾಡತಕ್ಕದ್ದಲ್ಲ.

**14. ಅಪೀಲುಗಳು.–** 7ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸ್‌ನ್ನು ನಿರಾಕರಿಸುವ ಅಥವಾ 8ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನವೀಕರಿಸುವ ಅಥವಾ 13ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸ್‌ನ್ನು ಅಮಾನತ್ತಿನಲ್ಲಿಡುವ ಅಥವಾ ಆ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸ್‌ನ್ನು ರದ್ದುಪಡಿಸುವ ನಿಯಂತ್ರಣ ಪ್ರಾಧಿಕಾರಿಯ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆ ಆದೇಶದ ವಿರುದ್ಧ ಅಂಥ ಆದೇಶದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗೆ, ಅವನು ರಾಜ್ಯ ಸರ್ಕಾರದ ಗೃಹ ಕಾರ್ಯದರ್ಶಿಗೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಆ ಅವಧಿಯೊಳಗೆ ಅಪೀಲನ್ನು ಸಲ್ಲಿಸದಿರಲು ಸಾಕಷ್ಟು ಕಾರಣವಿತ್ತೆಂಬ ಬಗ್ಗೆ ಅಪೀಲುದಾರನು ರಾಜ್ಯ ಸರ್ಕಾರಕ್ಕೆ ಮನದಟ್ಟು ಮಾಡಿಕೊಟ್ಟರೆ, ಸದರಿ ಅರವತ್ತು ದಿನಗಳ ಅವಧಿಯ ಮುಕ್ತಾಯದ ತರುವಾಯವೂ ಅಪೀಲನ್ನು ಅಂಗೀಕರಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಪ್ರತಿಯೊಂದು ಅಪೀಲನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶದ ಪ್ರತಿಯನ್ನು ಅದರೊಂದಿಗೆ ಲಗತ್ತಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಅಪೀಲನ್ನು ವಿಲೇ ಮಾಡುವ ಮುಂಚೆ, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡತಕ್ಕದ್ದು.

**15. ಖಾಸಗಿ ಭದ್ರತಾ ಏಜೆನ್ಸಿಯು ನಿರ್ವಹಿಸಬೇಕಾದ ರಿಜಿಸ್ಟರು.–** (1) ಪ್ರತಿಯೊಂದು ಖಾಸಗಿ ಭದ್ರತಾ ಏಜೆನ್ಸಿಯು,–

(ಎ) ಖಾಸಗಿ ಭದ್ರತಾ ಏಜೆನ್ಸಿಯನ್ನು ನಿರ್ವಹಿಸುತ್ತಿರುವ ವ್ಯಕ್ತಿಗಳ ಹೆಸರುಗಳು ಮತ್ತು ವಿಳಾಸಗಳು;

(ಬಿ) ತನ್ನ ನಿಯಂತ್ರಣದಲ್ಲಿರುವ ಖಾಸಗಿ ಭದ್ರತಾ ರಕ್ಷಕರು ಮತ್ತು ಮೇಲ್ವಿಚಾರಕರ ಹೆಸರುಗಳು, ವಿಳಾಸಗಳು, ಫೋಟೋಗಳು ಮತ್ತು ಸಂಬಳಗಳು;

(ಸಿ) ಅದು ಯಾರಿಗೆ ಖಾಸಗಿ ಭದ್ರತಾ ರಕ್ಷಕರನ್ನು ಅಥವಾ ಸೇವೆಗಳನ್ನು ಒದಗಿಸಿರುವುದೋ ಆ ವ್ಯಕ್ತಿಗಳ ಹೆಸರುಗಳು ಮತ್ತು ವಿಳಾಸಗಳು; ಮತ್ತು

(ಡಿ) ನಿಯಮಿಸಬಹುದಾದಂಥ ಇತರ ವಿವರಗಳು

– ಇವುಗಳನ್ನು ಒಳಗೊಳ್ಳುವ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.

(2) ನಿಯಂತ್ರಣ ಪ್ರಾಧಿಕಾರಿಯು, ಅಧಿನಿಯಮದ ಸೂಕ್ತ ಪಾಲನೆಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ಖಾಸಗಿ ಭದ್ರತಾ ಏಜೆನ್ಸಿ, ಮೇಲ್ವಿಚಾರಕನಿಂದ ಅಥವಾ ಖಾಸಗಿ ಭದ್ರತಾ ರಕ್ಷಕನಿಂದ ತಾನು ಅಗತ್ಯವೆಂದು ಪರಿಗಣಿಸಿದಂಥ ಮಾಹಿತಿಯನ್ನು ಕೇಳಬಹುದು.

**16. ಲೈಸೆನ್ಸ್, ಮೊದಲಾದವುಗಳ ಪರಿಶೀಲನೆ.–** ನಿಯಂತ್ರಣ ಪ್ರಾಧಿಕಾರಿಯು ಅಥವಾ ಅದು ಈ ಬಗ್ಗೆ ಅಧಿಕೃತಗೊಳಿಸಿದ ಇತರ ಯಾರೇ ಅಧಿಕಾರಿಯು, ಯಾವುದೇ ಸೂಕ್ತ ಸಮಯದಲ್ಲಿ, ಖಾಸಗಿ ಭದ್ರತಾ ಏಜೆನ್ಸಿಯ ಆವರಣಕ್ಕೆ ಪ್ರವೇಶಿಸಬಹುದು ಮತ್ತು ಲೈಸೆನ್ಸಿಗೆ ಸಂಬಂಧಿಸಿದ ವ್ಯವಹಾರದ ಸ್ಥಳ, ದಾಖಲೆಗಳು, ಲೆಕ್ಕಪತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ಪರಿಶೀಲಿಸಬಹುದು ಮತ್ತು ಪರೀಕ್ಷಿಸಬಹುದು ಮತ್ತು ಯಾವುದೇ ದಸ್ತಾವೇಜಿನ ಪ್ರತಿಯನ್ನು ಪಡೆದುಕೊಳ್ಳಬಹುದು.

**17. ಫೋಟೋ ಗುರುತು ಚೀಟಿಯನ್ನು ನೀಡುವುದು.–** (1) ರಕ್ಷಕರನ್ನು ನಿಯೋಜಿಸುವ ಅಥವಾ ನೇಮಿಸುವ ಖಾಸಗಿ ಭದ್ರತಾ ಏಜೆನ್ಸಿಯು ಪ್ರತಿ ಖಾಸಗಿ ಭದ್ರತಾ ರಕ್ಷಕನಿಗೆ ಫೋಟೋ ಗುರುತಿನ ಚೀಟಿಯನ್ನು ನೀಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಫೋಟೋ ಗುರುತು ಚೀಟಿಯನ್ನು ನೀಡತಕ್ಕದ್ದು.

(3) ಪ್ರತಿ ಖಾಸಗಿ ಭದ್ರತಾ ರಕ್ಷಕ ಅಥವಾ ಮೇಲ್ವಿಚಾರಕನು, (1)ನೇ ಉಪ ಪ್ರಕರಣದ ಮೇರೆಗೆ ನೀಡಲಾದ ಫೋಟೋ ಗುರುತು ಚೀಟಿಯನ್ನು ತನ್ನೊಡನೆ ಇಟ್ಟುಕೊಂಡಿರತಕ್ಕದ್ದು ಮತ್ತು ನಿಯಂತ್ರಣ ಪ್ರಾಧಿಕಾರಿಯು ಅಥವಾ ಈ ಸಂಬಂಧ ಅವನಿಂದ ಅಧಿಕೃತಗೊಂಡ ಯಾರೇ ಇತರ ಅಧಿಕಾರಿಯು ಪರಿಶೀಲನೆಗಾಗಿ ಕೇಳಿದಾಗ ಅವನು ಹಾಜರುಪಡಿಸತಕ್ಕದ್ದು.

**18. ಅನಧಿಕೃತ ವ್ಯಕ್ತಿಗೆ ಮಾಹಿತಿಯನ್ನು ಬಹಿರಂಗಪಡಿಸುವುದು.–** (1) ಖಾಸಗಿ ಭದ್ರತಾ ಏಜೆನ್ಸಿಯಿಂದ ಖಾಸಗಿ ಭದ್ರತಾ ರಕ್ಷಕನಾಗಿ ನೇಮಕಗೊಳ್ಳುವ ಅಥವಾ ನೇಮಕಗೊಂಡಿರುವ ಅಥವಾ ನಿಯೋಜಿಸಲಾಗಿರುವ ಯಾರೇ ವ್ಯಕ್ತಿಯು, ಅಂಥ ನಿಯೋಜಕನು ಅವನಿಗೆ ವಹಿಸಿದ ಕೆಲಸಕ್ಕೆ ಸಂಬಂಧಿಸಿದಂತೆ ಅಂಥ ನಿಯೋಜನೆ ಕಾಲದಲ್ಲಿ ಪಡೆದ ಯಾವುದೇ ಮಾಹಿತಿಯನ್ನು, ಈ

ಅಧಿನಿಯಮದ ಮೇರೆಗೆ ಅಗತ್ಯಪಡಿಸಬಹುದಾದ ಅಥವಾ ಪೊಲೀಸರಿಂದ ನಡೆಸಲಾಗುವ ಯಾವುದೇ ವಿಚಾರಣೆಗೆ ಅಥವಾ ತನಿಖೆಗೆ ಸಂಬಂಧಿಸಿದಂತೆ ಒಂದು ಪ್ರಾಧಿಕಾರಿಯಿಂದ ಅಥವಾ ಕಾನೂನಿನ ಪ್ರಕ್ರಿಯೆಯ ಮೂಲಕ ಅಗತ್ಯಪಡಿಸಬಹುದಾದಂತೆ ಬಹಿರಂಗಪಡಿಸುವುದನ್ನು ಹೊರತುಪಡಿಸಿ, ನಿಯೋಜಕನಲ್ಲದ ಇತರ ಯಾರೇ ವ್ಯಕ್ತಿಗೆ ಅಥವಾ ನಿಯೋಜಕನು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ವ್ಯಕ್ತಿಗೆ ಬಹಿರಂಗಪಡಿಸತಕ್ಕದ್ದಲ್ಲ.

(2) ಒಂದು ಖಾಸಗಿ ಭದ್ರತಾ ಏಜೆನ್ಸಿಯ ಎಲ್ಲ ಖಾಸಗಿ ಭದ್ರತಾ ರಕ್ಷಕರು, ಆ ಏಜೆನ್ಸಿಯ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಯಾವುದೇ ತನಿಖೆಯ ಪ್ರಕ್ರಿಯೆಯಲ್ಲಿ ಪೊಲೀಸರಿಗೆ ಅಥವಾ ಅಂಥ ಪ್ರಾಧಿಕಾರಕ್ಕೆ ಅಗತ್ಯ ನೆರವನ್ನು ಒದಗಿಸತಕ್ಕದ್ದು.

(3) ಖಾಸಗಿ ಭದ್ರತಾ ರಕ್ಷಕನು, ತನ್ನ ಕರ್ತವ್ಯಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಯಾವುದೇ ಕಾನೂನಿನ ಉಲ್ಲಂಘನೆಯಾಗಿರುವುದನ್ನು ಗಮನಿಸಿದಲ್ಲಿ, ಅದನ್ನು ತನ್ನ ಮೇಲ್ವಿಚಾರಕನ ಗಮನಕ್ಕೆ ತರತಕ್ಕದ್ದು. ಆಗ ಮೇಲ್ವಿಚಾರಕನು ತನ್ನ ನಿಯೋಜಕನ ಅಥವಾ ಏಜೆನ್ಸಿಯ ಮೂಲಕವಾಗಿಯಾಗಲಿ ಅಥವಾ ಖುದ್ದಾಗಿಯಾಗಿಯಾಗಲಿ ಪೊಲೀಸರಿಗೆ ತಿಳಿಸತಕ್ಕದ್ದು.

**19. ಪ್ರತ್ಯಾಯೋಜನೆ.–** ರಾಜ್ಯ ಸರ್ಕಾರವು, (25ನೇ ಪ್ರಕರಣದ ಮೇರೆಗೆ ನಿಯಮ ರಚನಾಧಿಕಾರವನ್ನು ಹೊರತುಪಡಿಸಿ), ಈ ಅಧಿನಿಯಮದ ಮೇರೆಗೆ,–

(ಎ) ತಾನು ಚಲಾಯಿಸಬಹುದಾದ ಅಥವಾ ತಾನು ನೆರವೇರಿಸಬಹುದಾದ ಯಾವುದೇ ಅಧಿಕಾರವನ್ನು ಮತ್ತು ಪ್ರಕಾರ್ಯವನ್ನು; ಅಥವಾ

(ಬಿ) ನಿಯಂತ್ರಣ ಪ್ರಾಧಿಕಾರಿಯು ಚಲಾಯಿಸಬಹುದಾದ ಅಥವಾ ನೆರವೇರಿಸಬಹುದಾದ ಯಾವುದೇ ಅಧಿಕಾರ ಅಥವಾ ಪ್ರಕಾರ್ಯವನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿಷಯಕ್ಕೆ ಸಂಬಂಧಿಸಿದಂತೆ ಮತ್ತು ಅಂಥ ಷರತ್ತುಗಳು ಯಾವುದಾದರೂ ಇದ್ದರೆ ಅವುಗಳಿಗೆ ಒಳಪಟ್ಟ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸ ಬಹುದಾದಂತೆ ಸರ್ಕಾರಕ್ಕೆ ಅಧೀನನಾಗಿರುವ ಅಧಿಕಾರಿಯು ಅಥವಾ ಪ್ರಾಧಿಕಾರಿಯು ಅಥವಾ ನಿಯಂತ್ರಣ ಪ್ರಾಧಿಕಾರಕ್ಕೆ ಅಧೀನನಾಗಿರುವ ಅಧಿಕಾರಿಯೂ ಸಹ ಚಲಾಯಿಸಬಹುದು ಅಥವಾ ನೆರವೇರಿಸಬಹುದು ಎಂದು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

**20. ಕೆಲವು ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.–** (1) 4ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯು, ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಅಧಿನಿಯಮದ 9ನೇ, 10ನೇ ಮತ್ತು 12ನೇ ಪ್ರಕರಣಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಅಥವಾ ಖಾಸಗಿ ಭದ್ರತಾ ಏಜೆನ್ಸಿಯು, ಲೈಸೆನ್ಸಿನ ಅಮಾನತು ಅಥವಾ ರದ್ದಿಯಾತಿಯ ಜೊತೆಗೆ, ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತರಾಗತಕ್ಕದ್ದು.

**21. ಕೆಲವು ಸಮವಸ್ತ್ರಗಳ ಅನಧಿಕೃತ ಬಳಕೆಗಾಗಿ ದಂಡನೆ.–** ಯಾರೇ ಖಾಸಗಿ ಭದ್ರತಾ ರಕ್ಷಕ ಅಥವಾ ಮೇಲ್ವಿಚಾರಕನು ಭೂಸೇನೆಯ, ವಾಯುದಳದ, ನೌಕಾದಳದ ಅಥವಾ ಕೇಂದ್ರದ ಇತರ ಯಾವುದೇ ಸಶಸ್ತ್ರ ದಳಗಳ ಅಥವಾ ಪೊಲೀಸರ ಸಮವಸ್ತ್ರ ಅಥವಾ ಆ ಸಮವಸ್ತ್ರದ ಯಾವುದೇ ವಿಶಿಷ್ಟ ಗುರುತುಗಳು ಕಂಡುಬರುವ ಅಥವಾ ಅವುಗಳನ್ನು ಹೊಂದಿರುವ ಯಾವುದೇ ಉಡುಪನ್ನು ಧರಿಸಿದರೆ, ಆತನು ಮತ್ತು ಖಾಸಗಿ ಭದ್ರತಾ ಏಜೆನ್ಸಿಯ ಮಾಲೀಕನು ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತರಾಗತಕ್ಕದ್ದು.

**22. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಆಡಳಿತವನ್ನು ಹೊಂದಿದ್ದ ಮತ್ತು ಆ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲಾ ಎಚ್ಚರಿಕೆಯನ್ನು ವಹಿಸಿದ್ದೆನೆಂದು ಆತನು ರುಜುವಾತುಪಡಿಸಿದರೆ ಅವನನ್ನು ಈ ಉಪಪ್ರಕರಣದಲ್ಲಿ ಒಳಗೊಂಡಿರುವುದಾವುದೂ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅವರ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾಗಿರುವಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವರು ವ್ಯವಹರಣೆಗೆ ಹಾಗೂ ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) “ಕಂಪನಿ” ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮ್‌ಗೆ ಸಂಬಂಧಿಸಿದಂತೆ “ನಿರ್ದೇಶಕ” ಎಂದರೆ ಫರ್ಮ್‌ನಲ್ಲಿನ ಪಾಲುದಾರ.

**23. ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ನಿಯಂತ್ರಣ ಪ್ರಾಧಿಕಾರಿ ಅಥವಾ ಅವನು ಅಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಯ ವಿರುದ್ಧ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**24. ರಾಜ್ಯಗಳು ಅಳವಡಿಸಿಕೊಳ್ಳುವುದಕ್ಕಾಗಿ ಮಾದರಿ ನಿಯಮಗಳನ್ನು ರಚಿಸುವುದು.–** ಯಾವ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ನಿಯಮಗಳನ್ನು ರಚಿಸಬಹುದೋ ಆ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಸಂಬಂಧಿಸಿ ಕೇಂದ್ರ ಸರ್ಕಾರವು ಮಾದರಿ ನಿಯಮಗಳನ್ನು ರಚಿಸಬಹುದು ಮತ್ತು ಅಂಥ ಮಾದರಿ ನಿಯಮಗಳನ್ನು ರಚಿಸಿರುವಲ್ಲಿ, ರಾಜ್ಯ ಸರ್ಕಾರವು 25ನೇ ಪ್ರಕರಣದ ಮೇರೆಗೆ ಆ ವಿಷಯಕ್ಕೆ ಸಂಬಂಧಿಸಿದಂತೆ ಯಾವುವೇ ನಿಯಮಗಳನ್ನು ರಚಿಸುವಾಗ, ಅವು ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ಅಂಥ ಮಾದರಿ ನಿಯಮಗಳಿಗೆ ಅನುಗುಣವಾಗಿರತಕ್ಕದ್ದು.

**25. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ, ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ, ಈ ಕೆಳಗಿನ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) 10ನೇ ಪ್ರಕರಣದ (1)ನೇ ಉಪ ಪ್ರಕರಣದ (ಸಿ) ಖಂಡದ ಮೇರೆಗೆ ನಡತೆ ಮತ್ತು ಪೂರ್ವ ವೃತ್ತಾಂತಗಳ ಪರಿಶೀಲನೆಗಾಗಿ ಕಾರ್ಯವಿಧಾನ; 10ನೇ ಪ್ರಕರಣದ (1)ನೇ ಉಪ–ಪ್ರಕರಣದ (ಡಿ) ಖಂಡದ ಮೇರೆಗೆ ತರಬೇತಿಯ ರೀತಿ; 10ನೇ ಪ್ರಕರಣದ (1)ನೇ ಉಪ–ಪ್ರಕರಣದ (ಇ) ಖಂಡದ ಮೇರೆಗೆ ದೈಹಿಕ ಮಟ್ಟ; ಮತ್ತು 10ನೇ ಪ್ರಕರಣದ (1)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ಇತರ ಷರತ್ತುಗಳು;

(ಬಿ) 9ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನಿಯೋಜಿಸಬೇಕಾದ ಮೇಲ್ವಿಚಾರಕರ ಸಂಖ್ಯೆ;

(ಸಿ) 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸ್‌ನ ಮಂಜೂರಾತಿಗಾಗಿ ಅರ್ಜಿಯ ನಮೂನೆ;

(ಡಿ) 7ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಲೈಸೆನ್ಸ್‌ನ್ನು ಮಂಜೂರು ಮಾಡಬೇಕೋ ಆ ನಮೂನೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು 11ನೇ ಪ್ರಕರಣದ ಮೇರೆಗೆ ಅಂಥ ಲೈಸೆನ್ಸ್‌ನ್ನು ಮಂಜೂರು ಮಾಡಬೇಕೋ ಆ ಷರತ್ತುಗಳು;

(ಇ) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸ್‌ನ ನವೀಕರಣಕ್ಕಾಗಿ ಅರ್ಜಿಯ ನಮೂನೆ;

(ಎಫ್) 14ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಲು ನಮೂನೆ;

(ಜಿ) 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಿಜಿಸ್ಟರ್‌ನಲ್ಲಿ ನಿರ್ವಹಿಸಬೇಕಾದ ವಿವರಗಳು;

(ಎಚ್) 17ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಫೋಟೋ ಗುರುತಿನ ಚೀಟಿಯನ್ನು ನೀಡಬೇಕೋ ಆ ನಮೂನೆ;

(ಐ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ ಪ್ರತಿಯೊಂದು ಸದನದ ಮುಂದೆ ಅಥವಾ ಒಂದೇ ಸದನವನ್ನು ಒಳಗೊಂಡಿರುವಲ್ಲಿ ಆ ಸದನದ ಮುಂದೆ ಮಂಡಿಸತಕ್ಕದ್ದು.

(4) ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ರಚಿಸಿದ ಪ್ರತಿಯೊಂದು ನಿಯಮವನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮತ್ತು ವಿಧಾನಸಭೆಯು ಅಸ್ತಿತ್ವದಲ್ಲಿರುವಲ್ಲಿ, ಆ ಸಭೆಯ ಮುಂದೆ ಮಂಡಿಸತಕ್ಕದ್ದು.

**ಅನುಸೂಚಿ**

**[ಪ್ರಕರಣ 13 (1) (ಜೆ) ನೋಡಿ]**

(1) ಮಜೂರಿಗಳ ಸಂದಾಯ ಅಧಿನಿಯಮ, 1936 (1936ರ 4)

(2) ಔದ್ಯಮಿಕ ವಿವಾದಗಳ ಅಧಿನಿಯಮ, 1947 (1947ರ 14)

(3) ಕನಿಷ್ಠ ಮಜೂರಿಗಳ ಅಧಿನಿಯಮ, 1948 (1948ರ 11)

(4) ನೌಕರರ ಭವಿಷ್ಯನಿಧಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952 (1952ರ 19)

(5) ಬೋನಸ್ ಸಂದಾಯ ಅಧಿನಿಯಮ, 1965 (1965ರ 21)

(6) ಕರಾರು ಕಾರ್ಮಿಕರ (ವಿನಿಯಮನ ಮತ್ತು ರದ್ಧತಿ) ಅಧಿನಿಯಮ, 1970 (1970ರ 37)

(7) ಉಪದಾನ ಸಂದಾಯ ಅಧಿನಿಯಮ, 1972 (1972ರ 39)

(8) ಸಮಾನ ಪರಿಶ್ರಮಧನ ಅಧಿನಿಯಮ, 1976 (1976ರ 25)

(9) ಅಂತರರಾಜ್ಯ ವಲಸೆ ಕಾರ್ಮಿಕರ (ನೌಕರರ ನಿಯೋಜನೆ ಮತ್ತು ಸೇವಾ ಷರತ್ತುಗಳು) ಅಧಿನಿಯಮ, 1979 (1979ರ 34)

* * *

Govt. Press, Bangalore, P7, W.D:283 , Copies: 150